ಗುಲ್ಬರ್ಗ ಜಿಲ್ಲೆಯ ತಾಂಡಗಳ ವಿದ್ಯುದ್ದೀಕರಣದ ಬಗ್ಗೆ.

೬೯೩. ಶ್ರೀ ಎಂ. ವೀರಯ್ಯ ಸ್ವಾಮಿ (ಚಿಂಚೋಳಿ).—ಮಾನ್ಯ ವಿದ್ಯುಚ್ಛಕ್ತಿ ಹಾಗೂ, ಗಣಿ ಭೂ ವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಗುಲ್ಬರ್ಗ ಜಿಲ್ಲೆಯಲ್ಲಿ ವಿದ್ಯುದ್ದೀಕರಣವಾಗಿರುವ ತಾಂಡಗಳ ಸಂಖ್ಯೆ ಮತ್ತು ಇದುವರೆಗೆ ವಿದ್ಯುತ್ ಸೌಲಭ್ಯವಿಲ್ಲದಿರುವ ತಾಂಡಗಳ ಸಂಖ್ಯೆ ಎಷ್ಟು ? ಸರ್ಕಾರದವರು ಜಿಲ್ಲೆಯಲ್ಲಿರುವ ಎಲ್ಲಾ ತಾಂಡಗಳಿಗೂ ವಿದ್ಯುತ್ ಒದಗಿಸಲು ಕೈಗೊಂಡಿರುವ ಕ್ರಮಗಳೇನು ಮತ್ತು ಇದಕ್ಕೆ ಬೇಕಾಗುವ ಕಾಲಮಿತಿಯೆಷ್ಟು ? (ಪ್ರತಿ ತಾಲ್ಲೂಕಿನ ಅಂಕಿ ಅಂಶಗಳನ್ನು ನೀಡುವುದು).

ಶ್ರೀ ಜೆ. ಎಸ್. ದೇಶ್‌ಮುಖ್ (ವಿದ್ಯುತ್ ಗಣಿ ಮತ್ತು ಭೂ ವಿಜ್ಞಾನ ಮಂತ್ರಿಗಳು).—

ಅ) ಗುಲ್ಬರ್ಗ ಜಿಲ್ಲೆಯಲ್ಲಿ ಸುಮಾರು ೫೮೬ ತಾಂಡಗಳಿದ್ದು ೩೧–೧೦–೧೯೮೬ ರ ವೇಳೆಗೆ ೭೪ ತಾಂಡಗಳಿಗೆ ವಿದ್ಯುತ್ ಒದಗಿಸಲಾಗಿದೆ. ವಿದ್ಯುತ್ ಸೌಲಭ್ಯವಿಲ್ಲದ ತಾಂಡಗಳ ಸಂಖ್ಯೆ ಸಮಾರು ೫೧೨ ಬಾಕಿ ಉಳಿದಿರುವ ಎಲ್ಲಾ ತಾಂಡಗಳ ವಿದ್ಯುದ್ದೀಕರಣವನ್ನು ಹಾಲಿ ಇರುವ ಮತ್ತು ಉದ್ದೇಶಿಕ ಗ್ರಾಮೀಣ ವಿದ್ಯುದ್ದೀಕರಣ ನಿಗಮದ ಯೋಜನೆಯಲ್ಲಿ ಹಂತ ಹಂತವಾಗಿ ಮಂಡಲಿಯ ಸಂಪನ್ಮೂಲಗಳು ಮತ್ತು ದೊರೆಯುವಿಕೆಯ ಸಾಮಗ್ರಿಗಳನ್ನು ನೋಡಿಕೊಂಡು ವಿದ್ಯುತ್ ಒದಗಿಸಲು ಪರಿಶೀಲಿಸಲಾಗುವುದು. ತಾಲ್ಲೂಕುವಾರು ವಿವರಗಳನ್ನು ಅನುಬಂಧದಲ್ಲಿ ನೀಡಿದೆ.

ಅನುಬಂಧ

ಗುಲ್ಬರ್ಗ ಜಿಲ್ಲೆಯಲ್ಲಿರುವ ತಾಂಡಗಳು ಮತ್ತು ೩೧–೧೦–೧೯೮೬ರ ವರೆಗೆ ವಿದ್ಯುತ್ ಒದಗಿಸಿರುವ ತಾಂಡಗಳ ವಿವರ.

ಕ್ರಮ ಸಂಖ್ಯೆ	ತಾಲ್ಲೂಕಿನ ಹೆಸರು	ಹಾಲಿ ಇರುವ ತಾಂಡಗಳು	೩೧–೧೦–೧೯೮೬ ರವರೆಗೆ ವಿದ್ಯುದ್ದೀಕರಣವಾದ ತಾಂಡಗಳು	ವಿದ್ಯುತ್ ಸರಬರಾಜು ಆಗದಿರುವ ತಾಂಡಗಳ ಸಂಖ್ಯೆ	ಷರಾ
೦	ಮೆಹಾಪುರ	೪೩	೭	೩೬	ಉಳಿದ ತಾಂಡಗಳನ್ನು
೨	ಶೋರಾಪುರ	೬೯	೫	೬೪	ಹೊಸ ಗ್ರಾಮೀಣ
೩	ಯಾದಗಿರ್	೫೨	೫	೪೭	ವಿದ್ಯುದ್ದೀಕರಣ
೪	ಸೇಡಂ	೫೩	೦	೫೨	ನಿಗಮದ ಯೋಜನೆ
೫	ಗುಲ್ಬರ್ಗ	೭೫	೦	೭೪	ಯಲ್ಲಿ
೬	ಚಿಕ್ಕೋಡಿ	೯೭	೫	೯೨	ಸೇರಿಸಲಾಗುವುದು
೭	ಅಫಜಲ್‌ಪುರ	೩೦	೧೧	೧೯	
೮	ಆಲಂದ್	೫೦	೧೨	೩೮	
೯	ಚಿತ್ತಾಪುರ	೬೦	೧೨	೭೭	
೧೦	ಜೇವರ್ಗಿ	೨೮	೧೫	೧೩	
	ಒಟ್ಟು	೫೮೬	೭೪	೫೧೨	

ಶ್ರೀ ವೀರಯ್ಯ ಸ್ವಾಮಿ.—ಮಾನ್ಯ ಅಧ್ಯಕ್ಷರೇ, ಉತ್ತರದಲ್ಲಿ ಚಿಂಚೋಳಿಗೆ ಬದಲಾಗಿ ಚಿಕ್ಕೋಡಿ ಎಂದು ಇದೆ. ಚಿಂಚೋಳಿಯಲ್ಲಿ ೯೭ ತಾಂಡಾಗಳ ಪೈಕಿ ಕೇವಲ ೫ ತಾಂಡಾಗಳಿಗೆ ಇದುವರೆಗೆ ವಿದ್ಯುದ್ದೀಕರಣ ಮಾಡಲಾಗಿದೆ. ಹೋದವರ್ಷ ಇದೇ ಪ್ರಶ್ನೆಯನ್ನು ಕೇಳಿದಾಗ ಕೇಂದ್ರ ಸರ್ಕಾರದಿಂದ ತಾಂಡಾಗಳ ಪೈಕಿ ಕ್ಲಾರಿಫಿಕೇಷನ್ ಕೇಳಿದ್ದಾರೆ. ಒಂದು ವೇಳೆ ಅಲ್ಲಿಂದ ಉತ್ತರ ಮತ್ತು ಕ್ಲಿಯರೆನ್ಸ್ ಸಿಕ್ಕಿದರೆ ಆಗ ವಿದ್ಯುದ್ದೀಕರಣ ಮಾಡಲಾಗುತ್ತದೆ ಎಂದು ಹೇಳಿದರು. ಈಗಿನ ಉತ್ತರದಲ್ಲಿ ಆ ವಿಷಯವಾಗಿ ಏನೂ ಹೇಳಿಲ್ಲ. ವಿದ್ಯುದ್ದೀಕರಣ ಮಾಡುವ ಬಗ್ಗೆ ಸಮಯವನ್ನು ನಿರ್ದಿಷ್ಟಪಡಿಸಿಲ್ಲ. ಆದ್ದರಿಂದ ಯಾವಾಗ ಈ ಕಾರ್ಯ ಕೈಗೊಳ್ಳುತ್ತೀರಿ ಎಂಬುದನ್ನು ಮಂತ್ರಿಗಳು ಹೇಳಬೇಕು ?

ಶ್ರೀ ಜೆ. ಎಸ್. ದೇಶಮುಖ್.—ಗುಲ್ಬರ್ಗ ಜಿಲ್ಲೆಯಲ್ಲಿ ಸುಮಾರು ೫೮೬ ತಾಂಡಾಗಳಿದ್ದು ೩೧-೧೧-೧೯೮೬ರ ವೇಳೆಗೆ ೭೪ ತಾಂಡಗಳಿಗೆ ವಿದ್ಯುತ್ ಸರಬರಾಜು ಮಾಡಲಾಗಿದೆ. ೧೯೮೪-೮೫ನೇ ಸಾಲಿನಲ್ಲಿ ೪ ತಾಂಡಗಳಿಗೂ ೧೯೮೫-೮೬ನೇ ಸಾಲಿನಲ್ಲಿ ೧-೪-೧೯೮೫ ರಿಂದ ೩೧-೧೧-೧೯೮೬ರ ವರೆಗೆ ೮ ತಾಂಡಗಳಿಗೂ ವಿದ್ಯುತ್ ಒದಗಿಸಲಾಯಿತು, ೩೧-೩-೧೯೮೬ರ ವೇಳೆಗೆ ಇನ್ನೂ ೩ ತಾಂಡಗಳಿಗೆ ವಿದ್ಯುತ್ ಒದಗಿಸಲಾಗುವುದು.

ಗುಲ್ಬರ್ಗ ಜಿಲ್ಲೆಯಲ್ಲಿ ೧೮ ಗ್ರಾಮೀಣ ವಿದ್ಯುದ್ದೀಕರಣ ನಿಗಮದ ಯೋಜನೆಗಳು ಕಾರ್ಯಗತವಾಗುತ್ತಿದೆ. ಈ ಯೋಜನೆಯಲ್ಲಿ ೧೫೦ ಗ್ರಾಮಗಳಿಗೆ ಸೇರಿದಂತೆ ಸುಮಾರು ತಾಂಡಾಗಳು ಇವುಗಳಲ್ಲಿ ಸೇರಿದ್ದು ಇದನ್ನು ೭ನೇ ಪಂಚವಾರ್ಷಿ ಯೋಜನೆಯಲ್ಲಿ ವಿದ್ಯುದ್ದೀಕರಣಗೊಳಿಸಲಾಗುವುದು.

ಗುಲ್ಬರ್ಗ ಜಿಲ್ಲೆಯಲ್ಲಿ ವಿದ್ಯುದ್ದೀಕರಣವಾಗಿರುವ ಗ್ರಾಮಗಳಿಗೆ ಹೆಚ್ಚುವರಿ ವಿದ್ಯುತ್ ಪೂರೈಕೆಗೆ ಬಿಟ್ಟು ಹೋಗಿರುವ ಉಪಗ್ರಾಮ, ತಾಂಡ, ಗಿರಿಜನ ಕಾಲೋನಿ ಜನತಾ ಕಾಲೋನಿಗಳ ವಿದ್ಯುದ್ದೀಕರಣ ಕ್ಕಾಗಿ ತೀವ್ರ ವಿದ್ಯುದ್ದೀಕರಣ ಯೋಜನೆ ಗ್ರಾಮೀಣ ವಿದ್ಯುದ್ದೀಕರಣ ನಿಗಮದ ಯೋಜನೆಯಡಿಯಲ್ಲಿ ತಯಾರಿಸಿ ೧೯೮೬-೮೭ನೇ ಸಾಲಿನಲ್ಲಿ ಮಂಜೂರಾತಿ ಪಡೆಯಲಾಗುವುದು.

ಪ್ರಶ್ನೆ ಸಂಖ್ಯೆ; ೬೪೮ (೧೪೦೪)

ಸದಸ್ಯರು ಹಾಜರಿರಲಿಲ್ಲ.

ಪ್ರಶ್ನೆ ಸಂಖ್ಯೆ : ೬೫೦ (೧೬೮೩)

ಸದಸ್ಯರು ಹಾಜರಿರಲಿಲ್ಲ.

ಪ್ರಶ್ನೆ ಸಂಖ್ಯೆ ; ೬೪೯ (೫೭೮)

ಸದಸ್ಯರು ಹಾಜರಿರಲಿಲ್ಲ,

ಚಿಕ್ಕಮಗಳೂರು ಜಿಲ್ಲೆಯಲ್ಲಿ ಜಮೀನು ಮಂಜೂರಾಗಿದ್ದು ಕಂದಾಯ ವಸೂಲಿ ಮಾಡದಿರುವ ಬಗ್ಗೆ

೧೪೮೫. ಶ್ರೀ ಬಿ. ಬಿ. ನಿಂಗಯ್ಯ (ಮೂಡಿಗೆರೆ).—ಮಾನ್ಯ ಕಂದಾಯ ಹಾಗೂ ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ೧೯೭೯-೮೦ ರಿಂದ ೧೯೮೪-೮೫ರ ವರೆಗೆ ಚಿಕ್ಕಮಗಳೂರು ಜಿಲ್ಲೆಯಲ್ಲಿ ಜಮೀನು ಮಂಜೂರಾಗಿದ್ದು ಕಂದಾಯ ವಸೂಲಿ ಮಾಡದೆ ತಗಾದೆ ರಶೀದು ಕೊಡದೆ ಇರುವ ಪ್ರಕರಣಗಳ ಸಂಖ್ಯೆ ಹಾಗೂ ವಿಸ್ತೀರ್ಣವೆಷ್ಟು ?

ಆ) ೧೯೭೯-೮೦ ರಿಂದ ೧೯೮೪-೮೫ರ ವರೆಗೆ ಇದರಿಂದ ಆಗಿರುವ ಸೊರಿಕೆಯ ವಿವರದ ಒಟ್ಟು ಮೊಬಲಗೆಷ್ಟು ?

ಇ) ಮಂಜೂರಾದ ವಿಸ್ತೀರ್ಣಕ್ಕೆ ಕಂದಾಯ ವಿಧಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಈ ರೀತಿ ಆಗಿರುವ ಪ್ರಕರಣಗಳ ಬಗ್ಗೆ ಸರ್ಕಾರದವರು ಏನು ಕ್ರಮ ಕೈಗೊಳ್ಳುವರು?